ಈದ್ಗಾ ಮೈದಾನದ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡುವ ವಿಷಯವಿಷ್ಟೆ. ನಿನ್ನೆ ಇಲ್ಲಿ ಈದ್ಗಾ ಮೈದಾನದ ಬಗ್ಗೆ ರಿಪ್ಲೈಯನ್ನು ಕೊಡುವಾಗ ಹೇಳಿದರು, ಹಿಂದೆ ಸರ್ಕಾರ ಏನು ಅಫಿಡವಿಟನ್ನು ಕೊಟ್ಟಿದೆ, ಅದರಲ್ಲಿ ಮತ್ತು ಈಗ ಮೊನ್ನೆ ಅಫಿಡವಿಟ್ ಕೊಟ್ಟಿರುವಂತಹದ್ದು ಅಥವಾ ಪತ್ರ ಬರೆದಿದ್ದು ವ್ಯತ್ಯಾಸ ಇಲ್ಲ ಎನ್ನತಕ್ಕ ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಆದರೆ ನಾನೀಗ ನೋಡಿದಂತಹ ವಕೀಲರಿಗೆ ಕೊಟ್ಟಂತಹ ಪತ್ರದಲ್ಲಿ ಅವರು ಏನು ಬರೆದು ಕೊಟ್ಟಿದ್ದಾರೆಂದರೆ ಕೇವಲ ಈದ್ಗಾ ಮೈದಾನದಲ್ಲಿ ಮುಸ್ಲಿಮರಿಗೆ . . . . .

ಅಧ್ಯಕ್ಷರು: ತಾವು 29 ರಂದು ರೈಸ್ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೌದು, ತಾವು ಇದನ್ನು ನಿಯಮ 29ಕ್ಕೆ ರೈಸ್ ಮಾಡಲು ಅವಕಾಶ ಕೊಟ್ಟರೆ ಪರವಾಗಿಲ್ಲ.

ಅಧ್ಯಕ್ಷರು: ಆಯಿತು, ರೈಸ್ ಮಾಡಿ, ಇವತ್ತು ಆ ವಿಚಾರ ಇಲ್ಲ. ತಾವು 29ರಂದು ರೈಸ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು 29ಕ್ಕೆ ಡಿಸ್ಕಷನ್‌ಗೆ ತೆಗೆದುಕೊಳ್ಳುತ್ತೇನೆಂದರೆ ನಾನು ಈಗ ರೈಸ್ ಮಾಡುವುದಿಲ್ಲ.

ಅಧ್ಯಕ್ಷರು: 29 ರಂದು ರೈಸ್ ಮಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ: ನಾನೂ 29 ರಂದು ರೈಸ್ ಮಾಡಲಿಕ್ಕೆ ಜೀರೋ ಅವರ್‌ನಲ್ಲಿ ನಾನೂ ಕೂಡ ಬರೆದುಕೊಟ್ಟಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್: 29ಕ್ಕೆ ಡಿಸ್ಕಷನ್‌ಗೆ ಅವಕಾಶ ಕೊಡಿ ಸಾರ್.

ಅಧ್ಯಕ್ಷರು: 29ರ ಪ್ರಕಾರ ತೆಗೆದುಕೊಳ್ಳೋಣ. ಮಾನ್ಯ ಶ್ರೀರಾಮರೆಡ್ಡಿ ಯವರೇ, ತಮ್ಮ ವಿಚಾರ ಪ್ರಸ್ತಾಪ ಮಾಡಿ.

ಇ) ಅಕ್ರಮ ಗಣಿಗಾರಿಕೆ ತಡೆದರೆ ಅಕ್ಷರ ದಾಸೋಹ, ವಸತಿ ಯೋಜನೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಖರ್ಚು ಭರಿಸಬಹುದು ಎಂಬ ಅರಣ್ಯ ಸಚಿವರ ವರದಿ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಅಕ್ರಮ ಗಣಿಕಾರಿಕೆಯಿಂದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ ತಡೆದರೆ ಅಕ್ಷರ ದಾಸೋಹ, ವಸತಿ ಯೋಜನೆ, ಪಂಪುಸೆಟ್ಟುಗಳಿಗೆ ಉಳಿತ ವಿದ್ಯುತ್ ನೀಡಲು ಆಗುವ ಖರ್ಚನ್ನು ಭರಿಸಬಹುದು, ಎಂದು ಹೇಳಿ ಒಂದು ವರದಿಯನ್ನು ಮಾನ್ಯ ಅರಣ್ಯ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಅಂದರೆ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ಅಕ್ರಮ ಗಣಿಗಾರಿಕೆಗಳು ಏನು ಇದೆ, ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಬೇಕು, ಆ ಅಕ್ರಮ ಗಣಿಗಾರಿಕೆಗಳು ನಿಂತರೆ ಇಷ್ಟಕ್ಕೆ ನಾವು ಉಚಿತವಾಗಿ ಹಣ ಕೊಡಬಹುದು ಎಂದು ಹೇಳತಕ್ಕಂಥ ಒಂದು ಸುಂದರವಾದಂತಹ ವರದಿಯನ್ನು ಕೊಟ್ಟಿದ್ದಾರೆ. ನಾನು ಖಂಡಿತವಾಗಿ ಮಾನ್ಯ ಅರಣ್ಯ ಮಂತ್ರಿಗಳಾದಂತಹ ಶ್ರೀ ಚೆನ್ನಗಪ್ಪ ಅವರನ್ನು ಅಭಿನಂದನೆ ಮಾಡಲೇ ಬೇಕು. ಅಂತಹ ಒಂದು ವಾಸ್ತವ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ವರದಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ವರದಿ ಏನು ಕೊಟ್ಟಿದ್ದಾರೆ ಎಂದು ಹೇಳತಕ್ಕದ್ದನ್ನು ಹೌಸ್‌ನಲ್ಲಿ ಟೇಬಲ್ ಮಾಡಬೇಕು. ಏಕೆಂದರೆ ಬಹಳ ಒಳ್ಳೆಯ ಪ್ರಮುಖವಾದಂತಹ ವರದಿಯನ್ನು ಮಾನ್ಯ ಅರಣ್ಯ ಮಂತ್ರಿಗಳು ಇವತ್ತು ಕೊಟ್ಟಿದ್ದಾರೆ. ನಿಜವಾಗಿಯೂ ಕೂಡ ನಾವೆಲ್ಲರೂ ಅವರಿಗೆ ಅಭಾರಿ ಆಗಿರಬೇಕು. ವಾಸ್ತವಾದಂತಹ ಚಿತ್ರವನ್ನು ಕೊಟ್ಟಿದ್ದಾರೆ. ಡೀಟೇಲ್ಸ್ ಕೊಟ್ಟಿದ್ದಾರೆ. ನೀವು ಅನುಮತಿ ಕೊಟ್ಟರೆ ನಾನು ಡೀಟೇಲ್ ಆಗಿ ಹೇಳುತ್ತೇನೆ.